**ಸಾಕ್ಷಿಯನ್ನು ದಿನಾಂಕಃ 04.07.2025 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ ಎಂ ಎ ಎನ್ ರವರಿಂದಃ**

ವಾದಿಯ ತಾತ ರವರು ನರಸೀಪುರ ಗ್ರಾಮದ ಸ ನಂ 20/1 ಜಮೀನನ್ನು 2 ನೇ ಪ್ರತಿವಾದಿಯವರಿಗೆ ಬರೆದುಕೊಟ್ಟಿರುತ್ತಾರೆ. ಸ.ನಂ 20 ರ ಜಮೀನು 2021-22 ರಲ್ಲಿ ಪೋಡಿಯಾಗಿರುತ್ತದೆ. ಸ.ನಂ 20/1 ರ ಚಕ್ಕುಬಂದಿ ನನಗೆ ತಿಳಿದಿರುತ್ತದೆ. ಪೂರ್ವಕ್ಕೆ ಜಿತೇಂದ್ರ ರವರ ಜಮೀನು ಪಶ್ಚಿಮಕ್ಕೆ ಸರ್ಕಾರಿ ಜಾಗ, ಉತ್ತರಕ್ಕೆ ಚಾಮರಾಜ ರವರ ಜಮೀನು ಮತ್ತು ದಕ್ಷಿಣಕ್ಕೆ ಸರ್ಕಾರಿ ಜಾಗ. ಸನ 20 ರ ಜಮೀನಲ್ಲಿ 1 ನೇ ಪ್ರತಿವಾದಿ ರವರ ತಂದೆ 8 ಎಕರೆ 13 ಗುಂಟೆ ಜಮೀನನ್ನು ವಿಭಾಗ ಪತ್ರದ ಮೂಲಕ ನೀಡಿರುವ ಪತ್ರವನ್ನು ನಿಮಗೆ ಯಾರು ಕೊಟ್ಟಿರುತ್ತಾರೆ ಎಂದರೆ ನನ್ನ ಹೆಂಡತಿಯ ತಾಯಿ ಕೆಂಡಮ್ಮ ರವರು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ವಿಭಾಗ ಪತ್ರದ ಬಗ್ಗೆ ನನಗೆ ಸಂಪೂರ್ಣವಾದ ಮಾಹಿತಿ ಇರುತ್ತದೆ. ಸಾಕ್ಷಿಗೆ ವಿಭಾಗ ಪತ್ರದಲ್ಲಿ ಒಟ್ಟು ಎಷ್ಟು ಶೆಡ್ಯೂಲ್ ಸ್ವತ್ತುಗಳನ್ನು ತೋರಿಸಲಾಗಿರುತ್ತದೆ ಎಂದರೆ ಸಾಕ್ಷಿಯು ಕೆಂಡಮ್ಮ ರವರಿಗೆ ಸ ನಂ 20/1 ರಲ್ಲಿ 8 ಎಕರೆ 13 ಗುಂಟೆ ಜಮೀನು ಬಂದಿರುತ್ತದೆ ಅದು ಮಾತ್ರ ನನಗೆ ತಿಳಿದಿರುತ್ತದೆ ಎಂದು ನುಡಿಯುತ್ತಾರೆ.

ಕೆಂಡಮ್ಮ ನವರ ತಂದೆ ಯವರಿಗೆ ಒಟ್ಟು 5 ಜನ ಮಕ್ಕಳಿರುತ್ತಾರೆ. ಪಾಲು ಪತ್ರದ ಪ್ರಕಾರ 5 ಜನ ಮಕ್ಕಳಿಗೆ ಯಾವ ಯಾವ ಆಸ್ತಿಯನ್ನು ನೀಡಿರುತ್ತಾರೆ ಎಂದು ನನಗೆ ತಿಳಿದಿರುವುದಿಲ್ಲ. ಕೆಂಡಮ್ಮ ನವರ ತಂದೆಯವರಿಗೆ ವಿಭಾಗ ಪತ್ರವನ್ನು ಮಾಡಿಕೊಡುವ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಸ ನಂ 20 ರಲ್ಲಿ ಕೆಂಡಮ್ಮ ರವರ ತಂದೆಯವರಿಗೆ ಕೇವಲ 4 ಎಕರೆ 20 ಗುಂಟೆ ಜಮೀನಿಗೆ ಮಾತ್ರ ಹಕ್ಕು ಇತ್ತು ಎಂದರೆ ಸರಿಯಲ್ಲ. ಕೆಂಡಮ್ಮ ರವರ ತಂದೆಯವರ ಜೀವಿತ ಅವಧಿಯಲ್ಲಿ ಯಾವುದೇ ವಿಭಾಗ ಪತ್ರವನ್ನು ಮಾಡಿಕೊಟ್ಟಿರುವುದಿಲ್ಲ, ಅವರು ತೀರಿಕೊಂಡ ನಂತರ ವಿಭಾಗ ಪತ್ರವನ್ನು ಸೃಷ್ಟಿಸಲಾಗಿರುತ್ತದೆ ಎಂದರೆ ಸರಿಯಲ್ಲ.

ಕೆಂಡಮ್ಮ ನವರ ತಂದೆಯವರು 1 ನೇ ವಾದಿಯ ಗಂಡನ ಕಡೆಯಿಂದ ಖರೀದಿ ಮಾಡಿದ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸಾಕ್ಷಿಯು ಮುಂದುವರಿದು ಅದನ್ನು

ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಡಿ 10 ರಿಂದ 18 ದಾಖಲಾತಿಗಳನ್ನು ಇತ್ತೀಚೆಗೆ ಸೃಷ್ಟಿ ಮಾಡಿ ಸಲ್ಲಿಸಲಾಗಿರುತ್ತದೆ ಎಂದರೆ ಸರಿಯಲ್ಲ. ವಾದಿಗಳಿಗೆ ಅನಾನುಕೂಲ ವಾಗುವಂತೆ ದಾಖಲಾತಿಗಳನ್ನು ಸೃಷ್ಟಿಸಿ ಹಾಜರುಪಡಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ